``2000ರ ನೋಂದಣಿ (ಕರ್ನಾಟಕ ಮಾರಾಟ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

9. ಪ್ರಕಟಣೆ

ಅಧ್ಯಕ್ಷರು :— ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೆ ನಾಳೆ ಅಂದರೆ 17ನೇ ತಾರೀಖಿನ ಬೆಳಿಗ್ಗೆ 9-00 ಗಂಟೆಗೆ ಲಘು ಉಪಹಾರವನ್ನು ರಾಜ್ ಭವನ್‌ದಲ್ಲಿ ಏರ್ಪಡಿಸಿರುತ್ತಾರೆ. ಮಾನ್ಯ ಸದಸ್ಯರೆಲ್ಲರೂ ಸದರಿ ಲಘು ಉಪಹಾರದಲ್ಲಿ ಭಾಗವಹಿಸಬೇಕೆಂದು ತಿಳಿಸುತ್ತೇನೆ. ನಂತರ ನಾಳೆ ಬೆಳಿಗ್ಗೆ 10-30ಕ್ಕೆ ಸಭೆ ಪ್ರಾರಂಭ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಬೆಲೆ ಕುಸಿತದ ಬಗ್ಗೆ ನಾವು ಬಹಳ ದಿವಸಗಳಿಂದ ಚರ್ಚೆ ಮಾಡುತ್ತಲೇ ಇದ್ದೇವೆ. ನಾವು ಪೂರಕ ಅಂದಾಜು ಇದೆ, ನಾಳೆ ಸದನ ಮುಗಿದರೆ ಪುನಃ ಸೋಮವಾರ ಇದರ ಬಗ್ಗೆ ಚರ್ಚಿಸಬೇಕಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಈಗಲೇ ಚರ್ಚೆ ಮಾಡಲು ಇಬ್ಬರೂ ಅಥವಾ ಮೂವರಿಗೋ ಅವಕಾಶ ಮಾಡಿಕೊಂಡಬೇಕೆಂದು ನಾವು ಈ ಬಗ್ಗೆ ಸಭಾತ್ಯಾಗ ಮಾಡಿದ್ದೇವೆ, ಇದು ಬಹಳ ಮುಖ್ಯವಾಗಿದೆ. ನಾವು ಕೂಡ ನಿಮಗೆ ದಿವಸಕ್ಕೆ ಎರಡು ಬಿಲ್ ಪಾಸ್ ಮಾಡಿಕೊಡಲು ಸಹಕರಿಸಿದ್ದೇವೆ. ಬೇಕಾದರೆ, ಮೇಲ್ಮನವಿಯಲ್ಲಿ ಎಷ್ಟು ಬಿಲ್ ಪಾಸ್ ಆಗಿದೆ, ನಾವು ಎಷ್ಟು ಬಿಲ್ ಪಾಸ್ ಮಾಡಿದ್ದೇವೆ ಬೇಕಾದರೆ, ಮೇಲ್ಮನೆಯಲ್ಲಿ ಎಷ್ಟು ಬಿಲ್ ಪಾಸ್ ಆಗಿದೆ, ನಾವು ಎಷ್ಟು ಬಿಲ್ ಪಾಸ್ ಮಾಡಿದ್ದೇವೆ ಎಂಬುದನ್ನು ತಾವು ನೋಡಿ. ನಾನೇಕೆ ಇದಕ್ಕೆ ಪ್ರಾಮುಖ್ಯತೆ ಕೊಡುತ್ತೇನೆಂದರೆ, ಈ ವಿಚಾರದ ಬಗ್ಗೆ ಮಾನ್ಯ ಆಹಾರ ಮಂತ್ರಿಗಳು, ಮಾನ್ಯ ಮಾರುಕಟ್ಟೆ ಸಚಿವರು, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಕೃಷಿ ಮಂತ್ರಿಗಳು ಉತ್ತರಿಸಬೇಕು. ಸೋಮವಾರ ನಾವು ಪೂರಕ ಅಂದಾಜು ಬಿಲ್‌ನ್ನು ಪಾಸ್ ಮಾಡಿ ಕೊಡುತ್ತೇವೆಂದು ಭರವಸೆ ನೀಡಿದ್ದೇವೆ. ಹೀಗಿದ್ದರೂ ನಮಗೆ ಮಾತನಾಡಲು ಅವಕಾಶ ಕೊಡಲಿಲ್ಲವೆಂದರೆ ಹೇಗೆ? ದಯಮಾಡಿ ತಾವು ಇದರ ಬಗ್ಗೆ ಪರಾಂಭರಿಸಬೇಕು. ಏಕೆಂದರೆ, ಈ ಚರ್ಚೆ ಪ್ರಾರಂಭವಾಗಿ 8 ದಿವಸಗಳಾಗಿವೆ, ಇನ್ನೂ ಇದನ್ನು ಮುಗಿಸಿಲ್ಲವೆಂದರೆ ಹೇಗೆ? ದಯಮಾಡಿ ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಈಗಾಗಲೇ ಈ ವಿಚಾರದ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಏಕೆಂದರೆ, ಮಾನ್ಯ ಇನಾಂದಾರ್‌ರವರು ಡೆಲ್ಲಿಗೆ ಹೋಗಿ ಬಂದಿರುತ್ತಾರೆ, ಅಲ್ಲಿ ಏನಾಯಿತು ಎಂಬುದರ ಬಗ್ಗೆ ಅವರು ಇಲ್ಲಿ ಹೇಳಿಕೆ ಕೊಡಬೇಕಾಗುತ್ತದೆ. ಎಲ್ಲಾ ಕಡೆಗಳಲ್ಲೂ ಕಾನೂನು ವ್ಯವಸ್ಥೆಯ ತೊಂದರೆ ಪ್ರಾರಂಭವಾಗಿದೆ. ಹೀಗಿರುವಾಗ ನಾವು ಈ ಚರ್ಚೆಯನ್ನು ಮುಗಿಸೋಣ ಎಂದರೆ ತಾವು ಇದಕ್ಕೆ ಮನಸ್ಸು ಮಾಡಲಿಲ್ಲವೆಂದರೆ ಹೇಗೆ? ನಾವು ಯಾವಾಗ ಮಾತನಾಡುವುದು? ನೀವು ಹೇಳಿದ ಪ್ರಕಾರ ಬಿ.ಎ.ಸಿ.ಯಲ್ಲಿ